ಅಸಲು ದಾವೆ ಸಂಖ್ಯೆ - 54/2024
ಪಿಡಬ್ಲ್ಯೂ - 01
ದಿನಾಂಕಃ 24-01-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ**

ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಹೂಡಿದ್ದೀರಾ ಎಂದರೆ ಪ್ರತಿವಾದಿಯರು ದಾವಾ ಆಸ್ತಿಯ ಉತ್ತರ ದಿಕ್ಕಿನ ರಸ್ತೆಯನ್ನು ಅತೀಕ್ರಮಣ ಮಾಡಿರುವುದರಿಂದ ಪರಿಹಾರ ಕೇಳಿ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ರಸ್ತೆಯನ್ನು ಯಾರು ಅತೀಕ್ರಮಣ ಮಾಡಿದ್ದಾರೆ ಎಂದರೆ, 3 ನೇ ಪ್ರತಿವಾದಿ, ಪ್ರಕಾಶ ರಾಯಚೂರ ಮತ್ತು ಪ್ರಮೋದ ರಾಯಚೂರ ರವರು ಅತೀಕ್ರಮಾಣ ಮಾಡಿರುತ್ತಾರೆ. ಸದರಿ ದಾವೆಯಲ್ಲಿ ಪ್ರಕಾಶ ರಾಯಚೂರ ಮತ್ತು ಪ್ರಮೋದ ರಾಯಚೂರ ರವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ, ಸಾಕ್ಷಿಯು ಅವರನ್ನು ಸಹ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿ, ಪ್ರಕಾಶ ರಾಯಚೂರ ಮತ್ತು ಪ್ರಮೋದ ರಾಯಚೂರ ರವರು ಯಾವಾಗ ಸದರಿ ರಸ್ತೆಯನ್ನು ಅತೀಕ್ರಮಾಣ ಮಾಡಿದರು ಎಂದರೆ, 2021 ರಲ್ಲಿ ಮಾಡಿರುತ್ತಾರೆ. ರಸ್ತೆ ಪೂರ್ಣ ಭಾಗವನ್ನು ಅಂದರೆ 13 ಫೂಟನ್ನು ಅತೀಕ್ರಮಣ ಮಾಡಿರುತ್ತಾರೆ. 3 ನೇ ಪ್ರತಿವಾದಿ, ಪ್ರಕಾಶ ರಾಯಚೂರ ಮತ್ತು ಪ್ರಮೋದ ರಾಯಚೂರ ರವರು ಯಾವುದೇ ಅತೀಕ್ರಮಾಣ ಮಾಡಿರುವುದಿಲ್ಲ ಎಂದರೆ, ಇವರುಗಳ ಅತೀಕ್ರಮಣ ಮಾಡಿ ಇ-ಸ್ವತ್ತು ಮಾಡಿಕೊಂಡು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನುಡಿಯುತ್ತಾರೆ.

3 ನೇ ಪ್ರತಿವಾದಿ, ಪ್ರಕಾಶ ರಾಯಚೂರ ಮತ್ತು ಪ್ರಮೋದ ರಾಯಚೂರ ರವರು ಮಾಡಿರುವ ಪ್ಲಾಟಗಳಲ್ಲಿ ಪಂಚಾಯತಿ ಅಧಿಕಾರಿಗಳು ಇವತ್ತೀನವರೆಗೂ ಯಾವುದೇ ರಸ್ತೆ ಮತ್ತು ಕಾಲುವೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು 2010 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತೇನೆ. ನೀವು ದಾವಾ ಆಸ್ತಿಯನ್ನು ಖರೀದಿ ಮಾಡುವ ವೇಳೆಯಲ್ಲಿ ಆ ಆಸ್ತಿಯು ಇ-ಸ್ವತ್ತು ಉತಾರ ಇರುತ್ತದೆಯಾ ಎಂದರೆ, ಆಗ ಇ-ಸ್ವತ್ತು ಇರಲಿಲ್ಲ. ನೀವು ಖರೀದಿ ಮಾಡುವ ವೇಳೆಯಲ್ಲಿ ದಾವಾ ಆಸ್ತಿಯ ಉತಾರದಲ್ಲಿ ಎಷ್ಟು ಜನರ ಹೆಸರು ಇತ್ತು ಎಂದರೆ 5 ಜನ ಹೆಸರು ಇತ್ತು. ಸದರಿ ದಾವಾ ಆಸ್ತಿಯ ಉತಾರದಲ್ಲಿ ಎಷ್ಟು ಅಳತೆ

ನಮೂದು ಮಾಡಿದ್ದರು ಎಂದರೆ ನಾನು ಉತಾರದಲ್ಲಿ ಅಳತೆಯನ್ನು ನೋಡಿರುವುದಿಲ್ಲ. 2010 ನೇ ಇಸವಿಯಲ್ಲಿ ನೀವು ದಾವಾ ಆಸ್ತಿಯನ್ನು ಖರೀದಿಸಿದಾಗ ದಾವಾ ಆಸ್ತಿಯ ಅಳತೆಯನ್ನು ಉತಾರದಲ್ಲಿ ನಮೂದಿಸಿರಲಿಲ್ಲ ಎಂದರೆ ಸಾಕ್ಷಿಯು ನಮೂದಿಸಿರಬಹುದು ಎಂದು ನುಡಿಯುತ್ತಾರೆ. 2010 ರಲ್ಲಿ ನೀವು ದಾವಾ ಆಸ್ತಿಯನ್ನು ಖರೀದಿಸದ್ದು ಅದರ ಉತಾರವನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ, ಮಾಹಿತಿ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. 2010 ನೇ ಇಸವಿಯ ಉತಾರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ, ಹಾಜರುಪಡಿಸಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

ದಾವಾ ಆಸ್ತಿಯನ್ನು ರೂ. 1,30,000/- ಕ್ಕೆ ಖರೀದಿ ಮಾಡಿರುತ್ತೇವೆ. ಖರೀದಿ ವ್ಯವಹಾರಾದಲ್ಲಿ ಯಾರುಯಾರು ಇದ್ದರು ಎಂದರೆ, ನಮ್ಮ ತಂದೆ, ನಾನು ಮತ್ತು 3 ನೇ ಪ್ರತಿವಾದಿ, ಗೋವಿಂದ ಆಚಾರ್ಯ ರಾಯಚೂರ, ವಾದಿರಾಜ ಆಚಾರ್ಯ ರಾಯಚೂರ ಮತ್ತು ಅಚ್ಯುತರಾವ ರಾಯಚೂರ ಹಾಜರಿದ್ದರು. ಖರೀದಿ ಮೊತ್ತವನ್ನು ಯಾರಿಗೆ ನೀಡಿರುತ್ತೀರಿ ಎಂದರೆ 3 ನೇ ಪ್ರತಿವಾದಿ, ಗೋವಿಂದ ಆಚಾರ್ಯ ರಾಯಚೂರ, ವಾದಿರಾಜ ಆಚಾರ್ಯ ರಾಯಚೂರ ಮತ್ತು ಅಚ್ಯುತರಾವ ರಾಯಚೂರ ರವರಿಗೆ ನೀಡಿರುತ್ತೇವೆ. ನೀವು ದಾವಾ ಆಸ್ತಿಯನ್ನು ಖರೀದಿ ಮಾಡುವ ವೇಳೆಯಲ್ಲಿ ದಾವಾ ಆಸ್ತಿಗೆ 3 ನೇ ಪ್ರತಿವಾದಿಯು ಮಾಲಿಕರಾಗಿ ಇರಲಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ದಾವಾ ಆಸ್ತಿಗೆ ಮಾಲಿಕರಾಗಿ ಇಲ್ಲದೆ ಇದ್ದರು ಸಹ ಅವರಿಗೆ ಖರೀದಿ ಹಣವನ್ನು ನೀಡಿರುತ್ತೀರಿ ಎಂದರೆ 3 ನೇ ಪ್ರತಿವಾದಿಯು ಸದರಿ ವ್ಯವಹಾರದಲ್ಲಿ ಇದ್ದುದರಿಂದ ನೀಡಿರುತ್ತೇನೆ. ಸದರಿ ಖರೀದಿ ಮೊತ್ತವನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೀಡಿರುತ್ತೇವೆ.

ದಾವಾ ಆಸ್ತಿಯ ಅಸಲು ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ, ಅದು ನಮ್ಮ ಬಳಿ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಅಸಲು ಪ್ರತಿಯನ್ನು ಉದ್ದೇಶಪೂರ್ವಕವಾಗಿ ನೀವು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಸಲ್ಲಿಸಿದ ದಾವಾ ಆಸ್ತಿಯ ಖರೀದಿ ಪತ್ರದಲ್ಲಿ ಮಾಲೀಕರ ಜಾಗದಲ್ಲಿ ಕೇವಲ ಇಬ್ಬರ ಸಹಿ ಮಾತ್ರ ಇರುತ್ತದೆ ಎಂದರೆ ಸಾಕ್ಷಿಯು ಅದು ವಾದಿರಾಜ ಆಚಾರ್ಯ ರಾಯಚೂರ ಮತ್ತು ಗೋವಿಂದ ಆಚಾರ್ಯ ರಾಯಚೂರ ರವರು ಮಾತ್ರ ಸಹಿ ಮಾಡಿರುತ್ತಾರೆ. ಎಲ್ಲಾ ಮಾಲಿಕರ ಸಹಿ ಮಾಡಿಸಲು ನಿಮಗೇನೂ ತೊಂದರೆ ಇರಲಿಲ್ಲ ಎಂದರೆ, ದಾವಾ ಮೂಲ ಮಾಲಿಕರ ವಾದಿರಾಜ ಮತ್ತು ಗೋವಿಂದ ಆಚಾರ್ಯ ರವರು ಇದ್ದುದ್ದರಿಂದ ಅವರ ಸಹಿಯನ್ನು ಮಾಡಿಸಿರುತ್ತೇನೆ.

ನೀವು ದಾವಾ ಆಸ್ತಿಯನ್ನು ಖರೀದಿ ಮಾಡುವ ವೇಳೆಯಲ್ಲಿ ದಾವಾ ಆಸ್ತಿಯ ಉತಾರದಲ್ಲಿ 5 ಜನರ ಮಾಲಿಕರ ಹೆಸರು ಇತ್ತು ಎಂದರೆ ಸರಿ. ದಾವಾ ಆಸ್ತಿಯನ್ನು 5 ಜನರ ಮಾಲಿಕರಿಂದ ಖರೀದಿ ಮಾಡಿಲ್ಲ, ದಾವಾ ಆಸ್ತಿಯನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ನಮೂದಿಸಿ ಚಕ್ಕಬಂದಿಯನ್ನು ತಪ್ಪು ತೋರಿಸಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ.

ನೀವು ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ವೇಳೆಯಲ್ಲಿ ವಾದಿರಾಜ ಆಚಾರ್ಯ ರಾಯಚೂರ ಮತ್ತು ಗೋವಿಂದ ಆಚಾರ್ಯ ರಾಯಚೂರ ರವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ಗೋವಿಂದ ಅಚಾರ್ಯ ರಾಯಚೂರ ರವರಿಗೆ 70 ವರ್ಷ ಮತ್ತು ವಾದಿರಾಜ ಅಚಾರ್ಯ ರವರಿಗೆ 60 ವರ್ಷ ವಯಸ್ಸಾಗಿತ್ತು. ನಿಮ್ಮ ಖರೀದಿ ಪತ್ರದಲ್ಲಿ ಖರೀದಿ ನೀಡುವವರ ಪೂರ್ಣ ಹೆಸರು ನಮೂದು ಆಗಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಉತಾರದಲ್ಲಿ ಅವರ ಹೆಸರು ಇದ್ದ ಹಾಗೆ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಖರೀದಿ ಪತ್ರವನ್ನು ಮೂಲ ಮಾಲಿಕರೆ ತಯಾರಿಸಿರುತ್ತಾರೆ. ದಾವಾ ಆಸ್ತಿ 83 ಮತ್ತು 82 ಒಂದಕ್ಕೊಂದು ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ಆಸ್ತಿ ನಂಬರ 82 ರ ಉತ್ತರ - ದಕ್ಷಿಣ ಎಷ್ಟು ಅಳತೆ ಇದೆಯೋ ಅಷ್ಟೆ ಅಳತೆ ದಾವಾ ಆಸ್ತಿಯ ಉತ್ತರ - ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿ.

ಆಸ್ತಿ ನಂಬರ 84 ರ ಉತ್ತರ ದಿಕ್ಕಿನಲ್ಲಿ 15 ಪೂಟು ರಸ್ತೆ ಇದೆ ಎಂದರೆ, ಸಾಕ್ಷಿಯು 140 ಪೂಟ ಆದ ನಂತರ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುತ್ತದೆ ಎಂದರೆ, ಸಾಕ್ಷಿಯ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ರಸ್ತೆಯು ಪ್ರತಿವಾದಿಯರು ಅತೀಕ್ರಮಣ ಮಾಡಿರುತ್ತಾರೆ ಎಂದರೆ ನುಡಿಯುತ್ತಾರೆ. ಆಸ್ತಿ ನಂ. 82 ಪೂರ್ವ ಪಶ್ಚಿಮ 16 ಪೂಟು ಇದೆ ಎಂದರೆ ಸರಿ. ಉತ್ತರ ದಕ್ಷಿಣ 132 ಪೂಟು ಇದೆ ಎಂದರೆ, ಉತ್ತರ ದಕ್ಷಿಣ 140 ಪೂಟು ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಉತ್ತರ ದಕ್ಷಿಣ 140 ಪೂಟ ಇದೆ ಎಂದು ನಿವೇನಾದರೂ ಅಳತೆ ಮಾಡಿದ್ದೀರಾ ಎಂದರೆ ನಮಗೆ ದಾವಾ ಆಸ್ತಿಯ ಮೂಲ ಮಾಲಿಕರು ಅಳತೆ ಮಾಡಿ ನಮೂದಿಸಿರುತ್ತಾರೆ. ನಂತರ ನಾವು ಸಹ ಅಳತೆ ಮಾಡಿರುತ್ತೇವೆ. ಮೂಲ ಮಾಲಿಕರು ಅಳತೆ ಮಾಡಿ ದಾವಾ ಆಸ್ತಿಯನ್ನು ನೀಡಿದರು ಅಂತಾ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಉತ್ತರಕ್ಕೆ ರಸ್ತೆ ಇಲ್ಲ ಎಂದರೆ, ರಸ್ತೆ ಇರುತ್ತದೆ ಅಂತಾ ಸಾಕ್ಷಿಯು ನುಡಿಯುತ್ತಾರೆ. ನೀವು ಸಲ್ಲಿಸಿದ ದಾವಾ ಆಸ್ತಿಯ ಹಾತ ನಕಾಶೆಯಲ್ಲಿ ಅಳತೆ ಮತ್ತು ಚಕ್ಕಬಂದಿಯನ್ನು ತೋರಿಸಿರುವುದಿಲ್ಲ ಸಾಕ್ಷಿಯು ನಕಾಶೆಯನ್ನು ನೋಡಿ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವ ರಸ್ತೆ ಅಳತೆ ಎಷ್ಟು ಇರಬಹುದು ಎಂದರೆ, 13 ಫೂಟು ಅಗಲ ಇರುತ್ತದೆ. ಉದ್ದ ಗೊತ್ತಿರುವುದಿಲ್ಲ ಅದು ಸರ್ಕಾರಿ ರಸ್ತೆಗೆ ಹೊಂದಿಕೊಂಡಿರುತ್ತದೆ. ಆಸ್ತಿ ನಂಬರ 82 ಮತ್ತು 83 ರ ಉತ್ತರ ದಿಕ್ಕಿನಲ್ಲಿ ದಾರಿ ಇದೆ ಎಂದು ತೋರಿಸಲು ನೀವು ಉತಾರ ನೋಡಿದ್ದೀರಾ ಎಂದರೆ ನಾನು ನೋಡಿರುತ್ತೇನೆ. ಸದರಿ ದಾರಿ ಇರವ ಬಗ್ಗೆ ನಮೂದು ಇರುವ ಉತಾರವನ್ನು ಮತ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಪ್ರಯತ್ನ ಪಡುತ್ತೇನೆ ಎಂದು ನುಡಿಯುತ್ತಾರೆ. ಆಸ್ತಿ ನಂಬರ 80,82,83,84 ರ ಆಸ್ತಿಯ ಉತ್ತರ ದಿಕ್ಕಿನಲ್ಲಿ ಆಸ್ತಿ ನಂಬರ 86 ಮತ್ತು 86/1 ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಆಸ್ತಿ ನಂಬರ 86 ರನ್ನು ಪ್ರತಿವಾದಿಯರು ಫಕ್ಕಿರಪ್ಪ ಕುರಬರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ, ಅದರ ಬಗ್ಗೆ ನಾನು ಸಂಭಂದಪಟ್ಟ ಅಧಿಕಾರಿಗಳಿಗೆ ತಕರಾರನ್ನು ಸಲ್ಲಿಸಿ ನಂತರ ಈ ದಾವೆಯನ್ನು ಹೂಡಿರುತ್ತೇನೆ. ಆಸ್ತಿ ನಂಬರ 86 ಫಕ್ಕಿರಪ್ಪ ಕುರಬರ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ನಂಬರ 86/1 3 ನೇ ಪ್ರತಿವಾದಿಯರ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ ಯಾವುದೇ ರಸ್ತೆ ಇಲ್ಲದಿದ್ದರು, 3 ನೇ ಪ್ರತಿವಾದಿ ಮತ್ತು ಫಕ್ಕಿರಪ್ಪ ಕುರಬರ ರವರ ಆಸ್ತಿ ಇದ್ದರು ಸಹ ಸದರಿ ಉತ್ತರ ದಿಕ್ಕಿಗೆ ರಸ್ತೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಫಕ್ಕಿರಪ್ಪ ಕುರಬರ ರವರ ಪೂರ್ವಕ್ಕೆ ಇರುವ ರಸ್ತೆಯ ಮೂಖಾಂತರ ಅವರು ವಹಿವಾಟು ಮಾಡತ್ತಾರೆ ಎಂದರೆ ಅವರು ಅಲ್ಲಿ ವಾಸ ಮಾಡುವುದಿಲ್ಲ ಮತ್ತು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನುಡಿಯುತ್ತಾರೆ.

ಆಸ್ತಿ ನಂ. 86 ಪೂರ್ವ ಪಶ್ಚಿಮ 77 ಫೂಟು ಉತ್ತರ ದಕ್ಷಿಣ 79 ಫೂಟು ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆಸ್ತಿ ಸಂಖ್ಯೆ 86 ನ್ನು 3 ನೇ ಪ್ರತಿವಾದಿಯು ಫಕ್ಕಿರಪ್ಪ ಕುರಬರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಫಕ್ಕಿರಪ್ಪ ಕುರಬರ ರವರು ಇರುವುದರಿಂದ ಅವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ, ದಾವೆ ಹೂಡುವ ಕಾಲಕ್ಕೆ ಅವರ ಮಾಲಿಕರು ಆಗಿ ಇರಲಿಲ್ಲ, ಆದ್ದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿರಲಿಲ್ಲ. ಫಕ್ಕಿರಪ್ಪ ಕುರಬರ ರವರು ಸದರಿ ಆಸ್ತಿ

ನಂಬರ 86 ನ್ನು ನೀವು ದಾವೆ ಹೂಡುವ ಪೂರ್ವದಲ್ಲಿ ಖರೀದಿಸಿದರೊ ಅಥವಾ ನಂತರ ಖರೀದಿಸಿದರೋ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿಯರು ನಿಮ್ಮ ಆಸ್ತಿಯ ಕಬ್ಜಾ ಮತ್ತು ವಹಿವಾಟಿಗೆ ಹರಕತ್ತ ಮಾಡಿರುವುದಿಲ್ಲ ಎಂದರೆ, ನಾವು ಓಡಾಡುವ ರಸ್ತೆಗೆ ಹರಕತ್ತು ಮಾಡಿರುವುದರಿಂದ ಈ ದಾವೆಯನ್ನು ಹೂಡಿರುತ್ತೇನೆ.3 ನೇ ಪ್ರತಿವಾದಿಯು ಯಾವಾಗ ಹರಕತ್ತನ್ನು ಮಾಡಿರುತ್ತಾರೆ ಎಂದರೆ 2021 ರಲ್ಲಿ ಮಾಡಿರುತ್ತಾರೆ. ಸದರಿ ಜಾಗೆಯಲ್ಲಿ ರಸ್ತೆ ಇಲ್ಲದೆ ಇರುವುದರಿಂದ 3 ನೇ ಪ್ರತಿವಾದಿಯರು ನಿಮ್ಮ ವಹಿವಾಟಿಗೆ ಅಡ್ಡಿ ಅತಂಕ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ದಿನಾಂಕಃ 25-09-2021 ರಂದು ಆಸ್ತಿ ನಂಬರ 86 ನ್ನು ಫಕ್ಕಿರಪ್ಪ ಕುರಬರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ, ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ಅಂದು ಅಳತೆ ಮಾಡುವ ಸಮಯದಲ್ಲಿ 3 ನೇ ಪ್ರತಿವಾದಿಯರು ನಮಗೆ ತಕರಾರು ಮಾಡಿರುವುದರಿಂದ ಈ ದಾವೆಯನ್ನು ಹೂಡಿರುತ್ತೇನೆ. ಪ್ರತಿವಾದಿಯರು ನಿಮಗೆ ಯಾವ ವರ್ಷ ನಿಮಗೆ ಅಡ್ಡಿ ಆತಂಕ ಮಾಡಿರುತ್ತಾರೆ ಎಂದರೆ, 2021 ರಲ್ಲಿ ಮಾಡಿರುತ್ತಾರೆ. 2021 ರಲ್ಲಿ ಅಡ್ಡಿ ಅತಂಕ ಮಾಡದೇ ಇದ್ದರು ಸಹ ಮಾಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಒಂದು ವೇಳೆ ನ್ಯಾಯಾಲಯದಿಂದ ಕೋರ್ಟ ಕಮೀಷನರರನ್ನು ನೇಮಕ ಮಾಡಿ ದಾವಾ ಆಸ್ತಿಯನ್ನು ಅಳತೆ ಮಾಡಿಸಿ ನಿಮ್ಮದೇನು ತಕರಾರು ಇರುವುದಿಲ್ಲ ಎಂದರೆ ಅಳತೆ ಮಾಡಿಸಿದರೆ ನಮಗೂ ಸಹ ಒಳ್ಳೆಯದು ಆಗುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.